# ನಗರಸಭೆ, ಚಿಕ್ಕಮಗಳೂರು

ಸಂಖ್ಯೆ:ಸಿಎಂಸಿ/ಎ10/ಎಸ್.ಎಫ್.ಸಿ/07–08 ಕಾಮಗಾರಿ/ಸಿಆರ್/01/2007–08 ದಿನಾಂಕ:28/07/2009

## ಮರುಟೆಂಡರ್ ಪ್ರಕಟಣೆ

2007–08ನೇ ಸಾಲಿನ ಎಸ್.ಎಫ್.ಸಿ ಅನುದಾನದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿರುವ ಈ ಕೆಳಕಂಡ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಿಂದ ನೊಂದಾಯಿತ ಗುತ್ತಿಗೆದಾರರಿಂದ ಶೇಕಡಾವಾರು ಮರು ಟೆಂಡರ್ ಕರೆಯಲಾಗಿದೆ. ಟೆಂಡರ್ ಸಲ್ಲಿಸುವ ಗುತ್ತಿಗೆದಾರರು ಠೇವಣಿಯನ್ನು ಡಿ.ಡಿ. ಅಥವಾ ನಗದು ಪಾವತಿ ರಸೀದಿಯನ್ನು ಮತ್ತು ನವೀಕೃತ ನೋದಾಣಿ ಪತ್ರದ ಜೆರಾಕ್ಸ್ ಪ್ರತಿಯನ್ನು ಪೌರ ಆಯುಕ್ತರು, ನಗರಸಭೆ, ಚಿಕ್ಕಮಗಳೂರು ಇವರ ಹೆಸರಿಗೆ ಅಥವಾ ಇವರಿಂದ ಅಧಿಕಾರ ಹೊಂದಿದ ಅಧಿಕಾರಿಗಳ ಹೆಸರಿಗೆ ಸೀಲು ಮಾಡಿದ ಟೆಂಡರ್ ಸಲ್ಲಿಸಬಹುದಾಗಿದೆ.. ಟೆಂಡರ್ ಫಾರಂ ಕೋರಿ ಕಛೇರಿಗೆ ಅರ್ಜಿ ಸಲ್ಲಿಸುವ ಮತ್ತು ಕಛೇರಿಯಿಂದ ಖಾಲಿ ಟೆಂಡರ್ ಫಾರಂಗಳನ್ನು ಪಡೆಯುವ ಕೊನೆಯ ದಿನಾಂಕ:25/08/2009ರಂದು ಸಂಜೆ 5–30ರವರೆಗೆ. ಭರ್ತಿ ಮಾಡಿದ ಟೆಂಡರ್ ಲಕೋಟೆಯನ್ನು ಕಛೇರಿಗೆ ಸಲ್ಲಿಸುವ ದಿನಾಂಕ:26/08/2009ರಂದು ಸಂಜೆ 4–30ರವರೆಗೆ. ನಂತರ ಬಂದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಸಾಧ್ಯವಾದಲ್ಲಿ ದಿನಾಂಕ:26/08/2009ರಂದು ಸಂಜೆ 5–00 ಗಂಟೆಗೆ ಹಾಜರಿದ್ದ ಗುತ್ತಿಗೆದಾರರ ಸಮಕ್ಷಮ ಟೆಂಡರ್ ತೆರೆಯಲಾಗುವುದು. ಅಥವಾ ಟೆಂಡರ್ ತೆರೆಯುವ ದಿನಾಂಕವನ್ನು ಮುಂದೆ ತಿಳಿಸಲಾಗುವುದು. ಹೆಚ್ಚಿನ ವಿವರವನ್ನು ಕಾಮಗಾರಿ/ಅಭಿಯಂತರರ ಶಾಖೆಯಲ್ಲಿ ಪಡೆಯಬಹುದಾಗಿದೆ.

ಮೇಲೆ ನಿಗಧಿಪಡಿಸಿದ ದಿನಾಂಕಗಳಲ್ಲಿ ಯಾವುದಾದರೂ ಸಾರ್ವತ್ರಿಕ ರಜೆ ಎಂದು ಘೋಷಿಸಲ್ಪಟ್ಟರೆ ಮರು ಕೆಲಸದ ದಿನಾಂಕವನ್ನು ಪರಿಗಣಿಸಲಾಗುವುದು. ಕಾಮಗಾರಿ ಕಾಲಾವಧಿ 1 ತಿಂಗಳು ಮಾತ್ರ ಹಾಗೂ ಗುತ್ತಿಗೆದಾರರ ದರ್ಜೆ ಅಂದಾಜುಪಟ್ಟಿಗೆ ಅನುಗುಣವಾಗಿ

| ಕ್ರ ಸಂ | ಕಾಮಗಾರಿ ಕೆಲಸಗಳ ವಿವರ | ಅಂದಾಜು ಮೊತ್ತ | ಠೇವಣಿ ಮೊತ್ತ | ಟೆಂಡರ್ ಫಾರಂ ಬೆಲೆ |
|---|---|---|---|---|
| 1 | ವಾರ್ಡ್ ನಂ:01ರ ಪಂಚಮುಖಿ ಗಣಪತಿ ರಸ್ತೆಯಲ್ಲಿ ಜೆಲ್ಲಿರಸ್ತೆ ನಿರ್ಮಾಣ | 150000.00 | 3750.00 | 450+ತೆರಿಗೆ |
| 2 | ವಾರ್ಡ್ ನಂ:04ರ ಶಿವಪ್ರಕಾಶ್ ಮತ್ತು ಲಕ್ಕೇಗೌಡರ ಮನೆ ಮುಂಭಾಗ ಜೆಲ್ಲಿರಸ್ತೆ ನಿರ್ಮಾಣ | 300000.00 | 7500.00 | 900+ತೆರಿಗೆ |
| 3 | ವಾರ್ಡ್ ನಂ:04ರ ವಿನಾಯಕ ನಗರದಲ್ಲಿ 2 ಮತ್ತು 3ನೇ ಕ್ರಾಸ್ ರಸ್ತೆಯಲ್ಲಿ ಜೆಲ್ಲಿರಸ್ತೆ ನಿರ್ಮಾಣ | 300000.00 | 7500.00 | 900+ತೆರಿಗೆ |
| 4 | ವಾರ್ಡ್ ನಂ:04ರ ದಿವಾಕರಭಟ್‌ರವರ ಮನೆಯಿಂದ ಅನಂತ್ ಮನೆವರೆಗೆ ಜೆಲ್ಲಿರಸ್ತೆ ನಿರ್ಮಾಣ | 200000.00 | 5000.00 | 600+ತೆರಿಗೆ |

## ಷರತ್ತುಗಳು

1 ಕಾಮಗಾರಿ ಪೂರ್ಣಗೊಂಡ ನಂತರದ 2 ವರ್ಷಗಳವರೆಗೆ ಸದರಿ ಕಾಮಗಾರಿಗಳ ನಿರ್ವಹಣೆಯನ್ನು ಗುತ್ತಿಗೆದಾರರೇ ಮಾಡುವುದು.

2 ಗುತ್ತಿಗೆದಾರರು 100.00 ಮೌಲ್ಯದ ಛಾಪಾ ಕಾಗದದಲ್ಲಿ ಪ್ರಮಾಣಪತ್ರ ನೀಡುವುದು.

3 ಕಾಮಗಾರಿಯನ್ನು 3ನೇ ವ್ಯಕ್ತಿಯಿಂದ ತಪಾಸಣೆ ಮಾಡಿಸಿದ ಬಗ್ಗೆ ದೃಢೀಕರಣ ಪತ್ರವನ್ನು ಸಲ್ಲಿಸಿದ ನಂತರ ಬಿಲ್ ಪಾವತಿಸಲು ಕ್ರಮ ವಹಿಸಲಾಗುದು.

4 ಇಎಂಡಿ ಮೊಬಲಗನ್ನು ಪೌರಾಯುಕ್ತರ ಹೆಸರಿನಲ್ಲಿ ಡಿ.ಡಿ. ಅಥವಾ ನಗದು ಪಾವತಿಸಿದ ರಶೀದಿಯನ್ನು ಟೆಂಡರ್ ಜೊತೆ ಸಲ್ಲಿಸುವುದು. ಇಎಂಡಿ ಇಲ್ಲದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.

5 ದ್ವಿಪ್ರತಿಯಲ್ಲಿ ನೀಡಿರುವ ಷೆಡ್ಯೂಲ್ "ಬಿ"ಯಲ್ಲಿ ದರಗಳನ್ನು ಅಂಕಿ ಮತ್ತು ಅಕ್ಷರಗಳಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.

6 ಕಾಮಗಾರಿಯನ್ನು ಕಾರ್ಯಾದೇಶದಂತೆ ನಿಗದಿತ ಅವಧಿಯೊಳಗೆ ಕ್ರಮಬದ್ಧವಾಗಿ ಪೂರ್ಣಗೊಳಿಸತಕ್ಕದ್ದು. ತಪ್ಪಿದಲ್ಲಿ ಆದೇಶವನ್ನು ರದ್ದು ಪಡಿಸಿ ಇಎಂಡಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

7 ಟೆಂಡರ್ ನಿಭಂದನೆಗಳು ಹಾಗೂ ಇತರೆ ಹೆಚ್ಚಿನ ಮಾಹಿತಿಗಳನ್ನು ಕಛೇರಿ ವೇಳೆಯಲ್ಲಿ ಕಾಮಗಾರಿ / ಅಭಿಯಂತರರ ಶಾಖೆಯಲ್ಲಿ ಪಡೆದುಕೊಳ್ಳುವುದು.

8 ಕಾಮಗಾರಿಯ ಶೇ.1ರಷ್ಟು ಮೊತ್ತವನ್ನು ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣಕ್ಕಾಗಿ ಸೆಸ್ಸನ್ನು ಇತರೆ ತೆರಿಗೆಯೊಂದಿಗೆ ಗುತ್ತಿಗೆದಾರರ ಬಿಲ್ಲಿನಲ್ಲಿ ಹಿಡಿಯಲಾಗುವುದು

9 ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಸಕ್ಷಮ ಪ್ರಾಧಿಕಾರ ಕಾಯ್ದಿರಿಸಿಕೊಡಿರುತ್ತದೆ.

10 ನಗರಸಭಾ ಕಛೇರಿಯ ವೆಬ್‌ಸೈಟ್ WWW.ChikmagalurCity.gov.inರಲ್ಲಿ ಟೆಂಡರ್ ಪ್ರಕಟಣೆಯನ್ನು ಪ್ರಕಟಿಸಲಾಗಿದೆ.

ಸಹಿ/–
(ಶ್ರೀ ಹೆಚ್.ಡಿ.ತಮ್ಮಯ್ಯ)
ಅಧ್ಯಕ್ಷರು,
ನಗರಸಭೆ, ಚಿಕ್ಕಮಗಳೂರು.

ಸಹಿ/–
(ಶ್ರೀಮತಿ. ಕಸ್ತೂರಿ ಎಸ್ ಪವಾರ್)
ಉಪಾಧ್ಯಕ್ಷರು,
ನಗರಸಭೆ, ಚಿಕ್ಕಮಗಳೂರು.

ಸಹಿ/–
(ಶ್ರೀ ಜಿ.ಚಂದ್ರಪ್ಪ)
ಪೌರ ಆಯುಕ್ತರು,
ನಗರಸಭೆ, ಚಿಕ್ಕಮಗಳೂರು